JUNE 28, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1.** ಧಾರವಾಡದಲ್ಲಿ ನಾಳೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋ ’ ಲಾಡ ನೇತೃತ್ವದಲ್ಲಿ, 'ನಮ್ಮ ನಗರ, ನಮ್ಮ ಸ್ವಚ್ಛತೆ' ಅಭಿಯಾನ ಜರುಗಲಿದೆ. ಸ್ವಚ್ಛತಾ ಅಭಿಯಾನದಲ್ಲಿ, ಧಾರವಾಡ ನಗರದ ನಾಲ್ಕು ವಲಯಗಳ, ಏಳು ವಾರ್ಡ್‌ಗಳ 16 ಸ್ಥಳಗಳು ಸೇರಿ, ಒಟ್ಟು 13 ಕಿಲೋ ಮೀಟರ್ ಉದ್ದದ ರಸ್ತೆ, ಚರಂಡಿಗಳನ್ನು ಏಕಕಾಲಕ್ಕೆ ಸ್ವಚ್ಛಗೊಳಿಸುವ ಯೋಜನೆ ರೂಪಿಸಲಾಗಿದೆ. ಬ್ಲ್ಯಾಕ್ ಸ್ಪಾಟ್ ಗುರುತಿಸಿ, ಸ್ವಚ್ಛಗೊಳಿಸಲಾಗುವುದು ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಎಲ್ಲ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಮಹಾನಗರ ಪಾಲಿಕೆ ಸಿಬ್ಬಂದಿ, ಪೌರಕಾರ್ಮಿಕರು, ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ಸ್ವಯಂಸೇವಕರು ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಲಿದ್ದಾರೆ.

<><><>

**2.** ಬೆಳಗಾವಿ ಮಹಾನಗರ ಪಾಲಿಕೆ ಮಹಾಪೌರ ಮಂಗೇಶ ಪವಾರ ಹಾಗೂ ಪಾಲಿಕೆ ಸದಸ್ಯ ಜಯಂತ ಜಾಧವ ಅವರ ಸದಸ್ಯತ್ವವನ್ನು ರದ್ದುಗೊಳಿಸಿ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಆದೇಶಿಸಿದ್ದಾರೆ. ಬೆಳಗಾವಿ ಗೋವಾ ವೇಸ್ ತಿನಿಸು ಕಟ್ಟೆಯಲ್ಲಿ ಕಾನೂನು ಬಾಹಿರವಾಗಿ, ಮಳಿಗೆಗಳನ್ನು ಪಡೆದುಕೊಂಡ ಆರೋಪ ಸಾಬೀತಾದ ಹಿನ್ನೆಲೆ, ಅನರ್ಹಗೊಳಿಸಲಾಗಿದೆ. ವಾರ್ಡ್ ನಂಬರ್ 23 ಮತ್ತು 41ರ ಪುರಸೇವಕರ ಸ್ಥಾನಗಳು ತೆರವಾಗಿವೆ ಎಂದು, ಪ್ರಕಟಿಸಲಾಗಿದೆ.

<><><>

**3.** ಬಚಾವತ್ ಆಯೋಗದ ವರದಿ ಆಧರಿಸಿ, ಕೃಷ್ಣ ನದಿ ನೀರನ್ನು, ಬಿ ಸ್ಕೀಮ್ ಅಡಿ ರಾಜ್ಯಕ್ಕೆ, ಸಂಪೂರ್ಣ ಬಳಕೆ ಮಾಡಿಕೊಳ್ಳಲು ಸಾಧ್ಯವಾಗಿಲ್ಲ ಎಂದು, ಮಾಜಿ ಪ್ರಧಾನಮಂತ್ರಿ ಎಚ್.ಡಿ ದೇವೇಗೌಡ ಹೇಳಿದ್ದಾರೆ. ಅವರು, ರಾಯಚೂರು ಜಿಲ್ಲೆ, ದೇವದುರ್ಗದಲ್ಲಿ, ಜೆ.ಡಿ.ಎಸ್. ಪಕ್ಷ ಆಯೋಜಿಸಿದ್ದ, ಸದಸ್ಯತ್ವ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

<><><>

**4.** ಕೊಪ್ಪಳ ಜಿಲ್ಲೆ, ಕಾರಟಗಿ ತಾಲೂಕು, ಸಿದ್ದಾಪುರ ಗ್ರಾಮ ಪಂಚಾಯ್ತಿ ಸದಸ್ಯೆ, ಪ್ರಿಯಾಂಕಾ ಪವಾರ, ಹೊಸ ದಿಲ್ಲಿಯಲ್ಲಿ ಇಂದು ಆರಂಭವಾದ, ಶೀ ರಿಪ್ರೆಸೆಂಟ್ಸ್ –20'25 ಏಳು ದಿನಗಳ, ನಾಯಕತ್ವ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಇಂಡಿಯನ್ ಸ್ಕೂಲ್ ಆಫ್ ಡೆಮಾಕ್ರಸಿ ಆಯೋಜಿಸಿರುವ, ಈ ಕಾರ್ಯಕ್ರಮದಲ್ಲಿ, ಕರ್ನಾಟಕವನ್ನು ಪ್ರತಿನಿಧಿಸಿರುವ ಪ್ರಿಯಾಂಕಾ, ಮಹಾತ್ಮ ಗಾಂಧಿ ನರೇಗಾ ಕಾರ್ಮಿಕರ ಕೌಶಲ ಹಾಗೂ ಅಭಿವೃದ್ಧಿ ಕುರಿತು, ಚರ್ಚಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಪ್ರಿಯಾಂಕಾ ಪವಾರ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಪ್ರಿಯಾಂಕಾ ಪವಾರ ಧ್ವನಿ 35 ಸೆಕೆಂದುಗಳು

<><><>

5. ಚಾಮರಾಜನಗರ ಜಿಲ್ಲೆ, ಮಲೈ ಮಹದೇಶ್ವರ ಬೆಟ್ಟದದಲ್ಲಿ, ನಾಲ್ಕು ಮರಿಗಳು ಹಾಗೂ ತಾಯಿ ಸೇರಿ, ಒಟ್ಟು 5 ಹುಲಿಗಳು ಸಾವನ್ನಪ್ಪಲು, ವಿಷ ಪ್ರಾಶನ ಕಾರಣ ಎಂದು, ಪ್ರಾಥಮಿಕ ತನಿಖೆ ದೃಢ ಪಡಿಸಿದೆ. ಹುಲಿ ಕೊಂದಿದ್ದ ಹಸುವಿನ ಕಳೇಬರಕ್ಕೆ, ವಿಷ ಬೆರೆಸಿ, ಬೇಟೆಯಾಗಿ ಬಳಸಿದ ಆರೋಪದ ಮೇಲೆ, 5 ದನಗಾಹಿಗಳು ಸೇರಿ ಒಟ್ಟು 6 ಜನರನ್ನು ಬಂಧಿಸಲಾಗಿದೆ. ಕೇಂದ್ರ ಪರಿಸರ ಸಚಿವಾಲಯ, ಪ್ರಕರಣದ ತನಿಖೆ ನಡೆಸಲು, ಇಬ್ಬರು ಅಧಿಕಾರಿಗಳನ್ನು ಒಳಗೊಂಡ, ವಿಶೇಷ ತನಿಖಾ ತಂಡ ರಚಿಸಿದೆ. ರಾಜ್ಯ ಸರ್ಕಾರ ಸಹ ಪ್ರತ್ಯೇಕ ತನಿಖಾ ತಂಡ ರಚಿಸಿದೆ.

<><><>

6. ಎಡೆಲ್ ಗಿವ್ ಪ್ರತಿಷ್ಠಾನದ ಸಹಯೋಗದಲ್ಲಿ, ನಾಳೆ ಬೆಳಗ್ಗೆ 10 ಗಂಟೆಗೆ, ಧಾರವಾಡದ ಕಲಕೇರಿ ಸಂಗೀತ ವಿದ್ಯಾಲಯದಲ್ಲಿ, ಸಾವನ್ ಕೀ ಸರಗಮ್ ಸಂಗೀತ ಕಾರ್ಯಕ್ರಮ ಆಯೋಜಿತವಾಗಿದೆ. ಪಂಡಿತ ಕೈವಲ್ಯ ಕುಮಾರ, ಗಾಯನ ಪ್ರಸ್ತುತ ಪಡಿಸಲಿದ್ದಾರೆ. ಜಿಲ್ಲಾಧಿಕಾರಿ ದಿವ್ಯಾ ಪ್ರಭು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪರಿಸರವಾದಿ ಪಂಚಾಕ್ಷರಿ ಹಿರೇಮಠ ಅತಿಥಿಗಳಾಗಿ, ಪಾಲ್ಗೊಳ್ಳಲಿದ್ದಾರೆ.

<><><>

7. ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಶಿಕ್ಷಣ ಇಲಾಖೆ ಜೊತೆಗೂಡಿ, ಶಾಲೆಗಳ ಶೈಕ್ಷಣಿಕ ಗುಣಮಟ್ಟ ಸುಧಾರಣೆ ಮತ್ತು ಶಿಕ್ಷಕರ ಸಮಸ್ಯೆಗಳ ಪರಿಹಾರದ ಕುರಿತು, ಚರ್ಚಿಸಲು, ಅಗತ್ಯ ಕ್ರಮ ಕೈಗೊಳ್ಳುವಂತೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ ಅವರಿಗೆ, ಪತ್ರ ಬರೆದಿದ್ದಾರೆ. ಧಾರವಾಡ ಜಿಲ್ಲಾಧಿಕಾರಿ, ದಿವ್ಯಾ ಪ್ರಭು ಅವರು, ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇರಿಸಿ, ಮಾದರಿ ಕಾರ್ಯ ಮಾಡಿದ್ದಾರೆ. ಈ ಮಾದರಿಯನ್ನು, ಪ್ರಾಯೋಗಿಕವಾಗಿ ಇತರೆ ಜಿಲ್ಲೆಗಳಿಗೆ ವಿಸ್ತರಿಸಬಹುದು ಎಂದು, ಅಭಿಪ್ರಾಯಪಟ್ಟಿದ್ದಾರೆ.

<><><>

8. ಪಂಢರಪುರದಲ್ಲಿ, ವಿಜೃಂಭಣೆಯಿಂದ ನಡೆಯುವ, ಆಷಾಢ ಏಕಾದಶಿಯ ಅಂಗವಾಗಿ, ವಾರಕರಿ ಸಂತರ ಜಾತ್ರೆಯಲ್ಲಿ, ಭಕ್ತಾದಿಗಳು ಪಾಲ್ಗೊಳ್ಳಲು ಅನುವಾಗುವಂತೆ, ನೈಋತ್ಯ ರೇಲ್ವೆ, ಜುಲೈ 4 ರಿಂದ 9ರ ವರೆಗೆ, ಕ್ಯಾಸಲ್‌ರಾಕ್–ಮಿರಜ್ ರೈಲನ್ನು, ತಾತ್ಕಾಲಿಕವಾಗಿ, ಪಂಢರಪುರದ ವರೆಗೆ, ವಿಸ್ತರಿಸಿದೆ.

<><><>

9. ಯಾದಗಿರಿ ಜಿಲ್ಲೆ, ಹುಣಸಗಿಯ, ನಾರಾಯಣಪುರ ಅಣೆಕಟ್ಟೆಯಿಂದ ಕೃಷ್ಣ ನದಿಗೆ ನೀರು ಹರಿ ಬಿಡಲಾಗುತ್ತಿದೆ. ನದಿ ಪಾತ್ರದ ಜನ ಮುಂಜಾಗ್ರತೆ ವಹಿಸುವಂತೆ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ, ರಾಯಚೂರು ಜಿಲ್ಲಾಡಳಿತ ಸೂಚಿಸಿದೆ.

<><><>

12. ಮುಖ್ಯಮಂತ್ರಿಯವರ, ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಯೋಜನೆ ಅಡಿ, ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ನೀಡಿದ, ಅನುದಾನದಲ್ಲಿ ಆಯಾ ಶಾಸಕರು, ತಮ್ಮ ವಿವೇಚನಾ ಕೋಟಾದ ಕಾಮಗಾರಿಗಳಿಗೆ, ಶೇಕಡ 25 ರಷ್ಟು ಮೊತ್ತವನ್ನು ಬಳಸಿಕೊಳ್ಳಲು, ಸರ್ಕಾರ ಅನುಮತಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.